# ಮುಗ್ಧಳಾಗಬೇಕು

## ರಾಧಿಕಾ ರಾವ್

### ಕಲರ್ಸ್ ಸೂಪರ್ 'ಮಂಗಳೂರು ಹುಡುಗಿ ಹುಬ್ಬಳಿ ಹುಡುಗ'ದ ಅಮೂಲ್ಯ

★ *ಮಂಗಳೂರು ಹುಡುಗಿಯಾಗಿ ಹೇಗೆನಿಸುತ್ತದೆ?*

ನನ್ನದೇ ಪಾತ್ರ ನಾನು ನಿರ್ವಹಿಸುತ್ತಿದ್ದೇನೆ ಎಂದೆನಿಸುತ್ತಿದೆ. ಮೂಲತಃ ನಾವು ಮಂಗಳೂರಿನವರು. ಬೆಳೆದಿದ್ದು ಬೆಂಗಳೂರಿನಲ್ಲಿ. ತುಳು ಅಂದರೆ ಅಭಿಮಾನ ಇದ್ದೇ ಇರುತ್ತದೆ. ಈ ಧಾರಾವಾಹಿಯ ಕಥೆ ಕೂಡ ಎರಡು ಭಿನ್ನ ಸಂಸ್ಕೃತಿಗಳ ಅನಾವರಣ ಮಾಡುತ್ತದೆ. ಇಲ್ಲಿ ಭಾಷೆಯ ಭಿನ್ನಾರ್ಥಗಳು ಉಂಟು ಮಾಡುವ ಅನರ್ಥ, ತಮಾಷೆ ಚೆನ್ನಾಗಿದೆ. ಎಷ್ಟೋ ಸಂದರ್ಭದಲ್ಲಿ ಮಾತಿನ ಭಾವಗಳನ್ನು ಅರಿಯದೆ ಜಗಳಕ್ಕೂ ಕಾರಣವಾಗುತ್ತದೆ. ಸಹಜವಾಗಿ ನನ್ನೂರು, ನನ್ನ ಭಾಷೆ ಎಂದ ತಕ್ಷಣ ಪ್ರೀತಿ ಉಕ್ಕಿ ಬರುತ್ತದೆ. ನಮ್ಮ ಮೂಲದ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವುದು ಎಂದರೆ ನಿಜಕ್ಕೂ ಖುಷಿಯಾಗುತ್ತದೆ.

★ *ಹುಬ್ಬಳ್ಳಿ ಹುಡುಗನ ಬಗ್ಗೆ ಏನೆನಿಸುತ್ತದೆ?*

ತುಂಬಾ ಒಳ್ಳೆಯ ಹುಡುಗ. ಮಾತು ಮಾತ್ರ ಖಡಕ್ ಆಗಿ ಇರುತ್ತವೆ. ಅದನ್ನು ಕೇಳಿದವರಿಗೆ ಒರಟು ಅನ್ನಿಸಲೂಬಹುದು. ಆದರೆ ಒರಟನಲ್ಲ. ವೈಯಕ್ತಿಕವಾಗಿ ಅನಿರುದ್ಧ ಎಷ್ಟು ಸ್ನೇಹಮಯಿನೋ ಪಾತ್ರದಲ್ಲಿಯೂ ಹಾಗೆಯೇ ಸ್ನೇಹವನ್ನು ತೋರಿಸುತ್ತಾರೆ. ಮಾತಿನಿಂದ ವ್ಯಕ್ತಿಯನ್ನು ನೋಡುವುದಕ್ಕಿಂತ ಅಂತರ್ಯದಿಂದ ಅರ್ಥಮಾಡಿಕೊಳ್ಳಬೇಕು ಎನ್ನುವುದಕ್ಕೆ ಇದು ಉತ್ತಮ ಉದಾಹರಣೆ.

★ *ಬಣ್ಣ ಹಚ್ಚಿದ್ದಾದರೂ ಹೇಗೆ?*

ನಾನು ಇಷ್ಟ ಇಲ್ಲದೆ ಈ ಮಾಯಾಲೋಕಕ್ಕೆ ಬಂದವಳು. ಈಗ ಬಿಟ್ಟು ಹೋಗಲು ಮನಸ್ಸಿಲ್ಲ. ಒಮ್ಮೆ ನನ್ನ ಗೆಳತಿ ಆಡಿಷನ್ ಕೊಡಲು ನನ್ನನ್ನು ಕರೆದುಕೊಂಡು ಹೋಗಿದ್ದಳು. ಅಲ್ಲಿ ನನಗೂ ನಟಿಸುವಂತೆ ಆಹ್ವಾನಿಸಿದರು. ನಾನು ನಿರಾಕರಿಸಿದೆ. ಹೀಗೆ ಸುಮಾರು ಅವಕಾಶಗಳು ಬಂದವು.

ಅಷ್ಟರಲ್ಲಿ ನಾನು ತುಳುವಿನಲ್ಲಿ ಎರಡು ಸಿನಿಮಾಗಳಲ್ಲಿ ನಟಿಸಿದ್ದೆ. ಅದು ಕೂಡ ನನ್ನ ಸಹೋದರ ಸಂಬಂಧಿಯ ಕಾರಣಕ್ಕೆ. ಅವರ ಒತ್ತಾಯಕ್ಕೆ ಮಣಿದು ಮತ್ತೆ ನಟಿಸುವುದಿಲ್ಲ ಎಂಬ ಮಾತು ಪಡೆದಿದ್ದೆ. ಇದಾದ ಮೇಲೆ ಅವಕಾಶಗಳು ಹೆಚ್ಚಾದವು. ಇದೇ ಸಂದರ್ಭದಲ್ಲಿ ನನ್ನ ಮಾವ ಬಂದಂತಹ ಅವಕಾಶಗಳನ್ನು ಏಕೆ ಉಪಯೋಗಿಸಬಾರದು ಎಂದು ಸಲಹೆ ನೀಡಿದರು. ಅದು ನಾನು ನಟಿಯಾಗಲು ಕಾರಣವಾಯಿತು. ಇಲ್ಲದಿದ್ದರೆ ನಾನು ಫ್ಯಾಷನ್ ಡಿಸೈನರ್ ಆಗಬೇಕು ಎಂದು ಕೊಂಡಿದ್ದೆ. ಈಗಲೂ ಅದು ಎಲ್ಲೋ ಮನಸ್ಸಿನಲ್ಲಿ ಇದೆ. ಹಾಗಾಗಿ ಓದುವುದನ್ನು ಮುಂದುವರಿಸಿದ್ದೇನೆ.

★ *ನಿಮಗೆ ಯಾವ ರೀತಿಯ ಪಾತ್ರ ಇಷ್ಟ*

ನನಗೆ ವಿಲನ್ ಆಗಿ ಮೆರೆಯಬೇಕು ಎನ್ನಿಸುತ್ತದೆ. ಹೀಗೆಂದು ಹಿಂದೊಮ್ಮೆ ಹೇಳಿದ್ದೆ. ಅದನ್ನು ಕೇಳಿದ ಬಹುತೇಕರು ಅಪಹಾಸ್ಯ ಮಾಡಿದ್ದರು. ನೋಡಲು 'ಮಗು ರೀತಿ ಇದ್ದೀಯಾ. ನೀನು ವಿಲನ್ ಆಗ್ತೀಯಾ?' ಅಂತ. ನಿಜಕ್ಕೂ ನನಗೆ ಆ ರೀತಿಯ ಪಾತ್ರದಲ್ಲಿ ಕಾಣಿಸಿಕೊಳ್ಳುವ ಆಶೆ ಇದೆ. ನನ್ನದು ಬಾಯಿ ಬಡಕಿ ಸ್ವಭಾವ. ಪರಿಚಯ ಇಲ್ಲದಿದ್ದರೂ ತಲೆ ತಿನ್ನುವಷ್ಟು ಮಾತಾಡುತ್ತೇನೆ. ಅದಕ್ಕೆ ವಿರುದ್ಧದ ನೆಲೆಯ ಪಾತ್ರ ನಿರ್ವಹಿಸಬೇಕು. ಅಂದರೆ ತುಂಬಾ ಮುಗ್ಧಳಾಗಿ ಮೌನದಲ್ಲಿ ಮಾತಿಗೆ ಅರ್ಥ ತುಂಬುವ ಪಾತ್ರದಲ್ಲಿ ಕಾಣಿಸಿಕೊಳ್ಳಬೇಕು ಎನ್ನಿಸುತ್ತದೆ.

★ *ನಟನೆಯ ಮೊದಲ ದಿನ ಹೇಗಿತ್ತು?*

ಕ್ಯಾಮೆರಾ ಎಂದರೆ ಏನು ಅನ್ನೋದು ಗೊತ್ತಿರಲಿಲ್ಲ. ಸಿಕ್ಕಾಪಟ್ಟೆ ಭಯದಲ್ಲಿ ಎದುರಿಸಿದೆ. ನಮ್ಮ ಪೋಷಕರ ಬೆಂಬಲದಿಂದ ನಟಿಸಲು ಸಾಧ್ಯವಾಯಿತು.

■ ರಾಗು

